<u>1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ</u>
<u>ಬೆಂಗಳೂರು ನಗರ</u>

ಸಿ.ಸಿ. ನಂ. 15317-2016

ಸಿಡಬ್ಲೂ -49 ಪಿಡಬ್ಲೂ- 11

ಸಾಕ್ಷಿದಾರನ ಹೆಸರು : ಆಯೇಶಾ
ಗಂಡನ ಹೆಸರು : ರಫೀ ಎ
ವಯಸ್ಸು : 52 ವರ್ಷ
ಕೆಲಸ : ಪಿಐ
ವಾಸ : ಬೆಂಗಳೂರು

<u>ಸಾಕ್ಷಿಯನ್ನು ದಿನಾಂಕಃ 25-09-2024 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.</u>
<u>ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ</u>

ನಾನು ಜನೇವರಿ 2016 ರಿಂದ ಜುಲೈ 2019 ರವರೆಗೆ ಸಿಸಿಬಿಯ ಡಬ್ಲೂ ಆಂಡ್ ಎನ್ ವಿಭಾಗದಲ್ಲಿ ಪಿಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣದಲ್ಲಿ ಚಾಸಾ 56 ರವರು ನನಗೆ ಚಾಸಾ 6 ರವರ ಹೇಳಿಕೆಯನ್ನು ದಾಖಲು ಮಾಡಿಕೊಡು ಬರುವಂತೆ ಮೌಖಿಕವಾಗಿ ತಿಳಿಸಿದ ಮೇರೆಗೆ ನಾನು ದಿ. 11-02-2016 ರಂದು ಚಾಸಾ 6 ರವರ ಸ್ನೇಹಿತರ ಬಾಡಿಗೆ ಮನೆಯ ವಿಳಾಸಕ್ಕೆ ಬೇಟಿ ನೀಡಿ ಚಾಸಾ 6 ರವರು ನೀಡಿದ ಲಿಖಿತ ಹೇಳಿಕೆಯನ್ನು ಸ್ವೀಕರಿಸಿ ಅದೇ ಸಮಯದಲ್ಲಿ ಅವರು ಒಂದು ಬ್ರಾ ಮತ್ತು ಒಂದು ಶರ್ಟ ನ್ನು ಹಾಜರುಪಡಿಸಿದ್ದು ಅವುಗಳನ್ನು ಮುಂದಿನ ಕ್ರಮಕ್ಕಾಗಿ ಪಂಚನಾಮೆಯ ಮೂಲಕ ಅಮಾನತ್ತು ಪಡಿಸಿಕೊಡಿಂರುತ್ತೇನೆ.

ಸಾಕ್ಷಿಯು ಚಾಸಾ 6 ರವರ ಹೇಳಿಕೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 7 ಎಂದು ಗುರುತಿಸಲಾಯಿತು. ಸಾಕ್ಷಿಯು ದಿ. 11-02-2016 ರ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 8 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ. 8 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಈ ದಿನ ನ್ಯಾಯಾಲಯದ ಮುಂದೆ ಇರುವ ಒಂದು ಬ್ರಾ ಮತ್ತು ಒಂದು ಶರ್ಟ ನ್ನು ನೋಡಿ ಗುರುತಿಸಿರುತ್ತಾರೆ ಅದನ್ನು ಕ್ರಮವಾಗಿ ಮು. ಮಾ 1 ಮತ್ತು 2 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ</u>

ಚಾಸಾ 56 ರವರು ನನಗೆ ಯಾವುದೇ ಲಿಖಿತ ಆದೇಶ ನೀಡಿರಲಿಲ್ಲ. ನಾನ ಸ್ವತಃ ಚಾಸಾ 6 ರವರ ದಾಖಲೆಯನ್ನು ಪಡೆದುಕೊಂಡಿರುವುದಿಲ್ಲ ಅವರೇ ಸ್ವತಃ ಹೇಳಿಕೆಯನ್ನು ನೀಡಿರುತ್ತಾರೆ. ನಾನು ಯಾವುದೇ ಸ್ಥಳಕ್ಕೆ ಬೇಟಿ ನೀಡಿಲ್ಲ. ಸ್ಥಳದಲ್ಲಿ ಯಾವುದೇ ಪಂಚನಾಮೆಯನ್ನು ಮಾಡಿರುವುದಿಲ್ಲ. ನಿಪಿ. 8 ಮತ್ತು ಮು. ಮಾ 1

ಮತ್ತು 2 ನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿ, ಮೇಲಾಧಿಕಾರಿಗಳ ಆದೇಶದಂತೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ